# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 31.01.2023ರಂದು ಪೂರ್ವಾಹ್ನ ಗಂಟೆ 10.00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2023ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು:**

| ಕ್ರ.ಸಂ. | | | ಸಹಿ |
|---|---|---|---|
| **1.** | ಪ್ರೊ. ಪಿ. ಸುಬ್ರಹ್ಮಣ್ಯ ಯಡಪಡಿತ್ತಾಯ<br>ಕುಲಪತಿಗಳು | ಅಧ್ಯಕ್ಷರು | |
| **2.** | ಡಾ. ಗಿರಿಧರ ರಾವ್ ಎಂ.ಎಸ್.,<br>ಜಂಟಿ ನಿರ್ದೇಶಕರು<br>**(ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ)** | ಸದಸ್ಯರು | |
| **3.** | ಪ್ರೊ. ಕರುಣಾಕರ ಎ. ಕೋಟೆಗಾರ್<br>**(Online ಮೂಲಕ)** | ಸದಸ್ಯರು | |
| **4.** | ಶ್ರೀ ರವಿಚಂದ್ರ ಪಿ. ಎಂ. | ಸದಸ್ಯರು | |
| **5.** | ಪ್ರೊ. ಜಯರಾಜ್ ಅಮೀನ್<br>ಡೀನರು, ಕಲಾ ನಿಕಾಯ | ಸದಸ್ಯರು | |
| **6.** | ಶ್ರೀ ಲೆವಿನ್ ಡಿ'ಸೋಜ | ಸದಸ್ಯರು | |
| **7.** | ಶ್ರೀ ಮೋಹನ್ ನಾಯ್ಕ್ | ಸದಸ್ಯರು | |
| **8.** | ಶ್ರೀಮತಿ ನಳಿನಾಕ್ಷಿ ಎ.ಎಸ್. | ಸದಸ್ಯರು | |
| **9.** | ಡಾ. ರಾಜೇಂದ್ರ ಎಸ್. ನಾಯಕ್<br>**(Online ಮೂಲಕ)** | ಸದಸ್ಯರು | |
| **10.** | ಡಾ. ಸಿಪ್ರಿಯನ್ ಮೊಂತೇರೋ<br>ಪ್ರಾಂಶುಪಾಲರು, ಶಿಕ್ಷಕರ ಶಿಕ್ಷಣ ಮಹಾವಿದ್ಯಾಲಯ,<br>ಸಾರ್ವಜನಿಕ ಶಿಕ್ಷಣ ಆಯುಕ್ತರ ಪರವಾಗಿ | ಸದಸ್ಯರು | |
| **11.** | ಪ್ರೊ. ಪಿ. ಎಲ್. ಧರ್ಮ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು | |
| **12.** | ಪ್ರೊ. ವೈ ಸಂಗಪ್ಪ<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ<br>ಆಹ್ವಾನಿತರು | |
| **13.** | ಪ್ರೊ. ಕಿಶೋರ್ ಕುಮಾರ್ ಸಿ. ಕೆ.<br>ಕುಲಸಚಿವರು (ಆಡಳಿತ) | ಸದಸ್ಯ<br>ಕಾರ್ಯದರ್ಶಿ | |

## ಪ್ರಾರಂಭಿಕ

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

➢ ಸ್ವಾಗತ:

I. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ **2000**ದ ಪ್ರಕರಣ **28(1)(ಬಿ)** ಪ್ರಕಾರ ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗಳಿಗೆ ಜಂಟಿ ನಿರ್ದೇಶಕರ ನೆಲೆಯಲ್ಲಿ ಹಾಜರಾಗಲು ಅಗಮಿಸಿರುವ ಡಾ. ಗಿರಿಧರ ರಾವ್ ಎಂ.ಎಸ್., ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಮುಡಿಪು ಇವರನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.

II. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ **2000**ದ ಪ್ರಕರಣ **28(1)(ಎಫ್)** ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳ ಜೇಷ್ಠತೆ ಹಾಗೂ ಸರದಿಯ ನೆಲೆಯಲ್ಲಿ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿರುವ ಡಾ. ರಾಜೇಂದ್ರ ಎಸ್. ನಾಯಕ್, ಪ್ರಾಂಶುಪಾಲರು, ಶ್ರೀ ಕಾಳಾವರ ವರದರಾಜ್ ಎಮ್. ಶೆಟ್ಟಿ ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ಕುಂದಾಪುರ, ಕೋಟೇಶ್ವರ ಇವರನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.

➢ ಕೃತಜ್ಞತೆ:

I. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ **2000**ದ ಪ್ರಕರಣ **28(1)(ಬಿ)** ಪ್ರಕಾರ ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಗಳಿಗೆ ಜಂಟಿ ನಿರ್ದೇಶಕರ ನೆಲೆಯಲ್ಲಿ ಹಾಜರಾಗುತ್ತಿದ್ದ ಡಾ. ಜೆನಿಫರ್ ಲೋಲಿಟಾ ಸಿ., ಇವರು ವರ್ಗಾವಣೆಯಾಗಿರುವ ವಿಷಯವನ್ನು ಕುಲಸಚಿವರು ಸಭೆಗೆ ತಿಳಿಸಿದರು.

II. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ **2000**ದ ಪ್ರಕರಣ **28(1)(ಜಿ)** ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸರ್ಕಾರದಿಂದ ನಾಮನಿರ್ದೇಶನಗೊಂಡಿರುವ ಈ ಕೆಳಗಿನ ಸಿಂಡಿಕೇಟು ಸದಸ್ಯರುಗಳ ಸದಸ್ಯತ್ವದ ಮೂರು ವರ್ಷಗಳ ಅವಧಿಯು ದಿನಾಂಕ **20.12.2022**ರಂದು ಕೊನೆಗೊಂಡಿರುವುದರಿಂದ ಸದರಿಯವರುಗಳನ್ನು ಸಿಂಡಿಕೇಟು ಸದಸ್ಯತ್ವದಿಂದ ಮುಕ್ತಗೊಳಿಸಲಾಗಿದೆ.

1. ಶ್ರೀ ವಿವೇಕಾನಂದ ಪನಿಯಾಲ, ಪನಿಯಾಲ ಹೌಸ್, ಕೊಡಿಯಾಳ ಗುತ್ತು, ಪೂರ್ವ ಮುಖ್ಯರಸ್ತೆ, ಮಂಗಳೂರು – **575 004**

2. ಶ್ರೀ ರವೀಂದ್ರನಾಥ ರೈ, ವಕೀಲರು, ಬಿನ್ ದಿ ಕ್ಯಾಪ್ಟನ್ ಬಾಲಕೃಷ್ಣ ರೈ, ಬಿ.ಎಸ್. 'ಲಕ್ಷ್ಮೀ ನಿವಾಸ', 3ನೇ ಕ್ರಾಸ್, ಕೊಡಿಯಾಲ ಗುತ್ತು ಪೂರ್ವ, ಕೊಡಿಯಾಲ ಬೈಲ್ ಅಂಚೆ, ಮಂಗಳೂರು
3. ಡಾ. ಪಾರ್ವತಿ ಅಪ್ಪಯ್ಯ, 'ಹಿಮವನ' ಮುಳಿಯಾ ಬಡಾವಣೆ, ಎಫ್. ಎಂ. ಕೆ. ಎಂ. ಸಿ. ಕಾಲೇಜು, ಹಿಂಭಾಗ, ಮಡಿಕೇರಿ ಪೋಸ್ಟ್, ಕೊಡಗು
4. ಶ್ರೀ ಕೆ. ರಮೇಶ, ನಂ.1004, ಮಹಾಬಲೇಶ್ವರ ಕ್ಲಾಸಿಕ್ ರೂಬಿ, ವಾಟರ್ ಟ್ಯಾಂಕ್ ಎದುರುಗಡೆ, ಶ್ರೀ ಗೋಪಾಲಕೃಷ್ಣ ದೇವಸ್ಥಾನದ ಹತ್ತಿರ, ಶಕ್ತಿನಗರ, ಮಂಗಳೂರು
5. ಡಾ. ಎಂ. ಎಸ್. ತಳವಾರ, ನಂ.777, 'ಜೇನುಗೂಡು', ಬನಶಂಕರಿ, 6ನೇ ಹಂತ, 5ನೇ ಬ್ಲಾಕ್, ಮೆಟ್ಟಕಲ್ಲಪಾಳ್ಯ, ಬೆಂಗಳೂರು
6. ಶ್ರೀ ಮೋಹನ್ ಪಡಿವಾಳ್, 'ಸಮೀಧ' M/s. ತೆಲ್ಲಾರ್ ರಸ್ತೆ, ಕಾರ್ಕಳ, ಉಡುಪಿ ಜಿಲ್ಲೆ – 574 104.

III. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಹೆಚ್) ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರ ಜೇಷ್ಠತೆ ಹಾಗೂ ಸರದಿಯ ನೆಲೆಯಲ್ಲಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡು, ರಾಜ್ಯ ಸರ್ಕಾರದ ಅನುಮೋದನೆಯೊಂದಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಪ್ರಾಧ್ಯಾಪಕರ ನೆಲೆಯಲ್ಲಿ ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದ ಪ್ರೊ. ವಿಶ್ವನಾಥ, ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಇವರ ಸದಸ್ಯತ್ವದ ಅವಧಿಯು 03.01.2023ರಂದು ಕೊನೆಗೊಂಡಿರುವುದರಿಂದ ಸದರಿಯವರನ್ನು ಸಿಂಡಿಕೇಟು ಸದಸ್ಯತ್ವದಿಂದ ಮುಕ್ತಗೊಳಿಸಲಾಗಿದೆ.

IV. ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಅಧಿನಿಯಮ 2000ದ ಪ್ರಕರಣ 28(1)(ಎಫ್) ಪ್ರಕಾರ ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟಿಗೆ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರುಗಳ ಜೇಷ್ಠತೆ ಹಾಗೂ ಸರದಿಯ ನೆಲೆಯಲ್ಲಿ ಸದಸ್ಯರಾಗಿ ಮಾನ್ಯ ಕುಲಪತಿಗಳಿಂದ ನಾಮನಿರ್ದೇಶನಗೊಂಡಿದ್ದ ಡಾ. ಉದಯಕುಮಾರ್ ಶೆಟ್ಟಿ, ಪ್ರಾಂಶುಪಾಲರು, ಸರಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರ, ಶಂಕರನಾರಾಯಣ, ಕುಂದಾಪುರ ಇವರನ್ನು ಸದಸ್ಯತ್ವದಿಂದ ಸದಸ್ಯತ್ವದಿಂದ ಮುಕ್ತಗೊಳಿಸಲಾಗಿದೆ.

ಇವರುಗಳು ತಮ್ಮ ಸಿಂಡಿಕೇಟು ಸದಸ್ಯತ್ವದ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಇವರಿಗೆ ಸಿಂಡಿಕೇಟ್ ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

I. ನಡವಳಿಗಳ ದೃಢೀಕರಣ

1. ದಿನಾಂಕ 20.12.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ಎಂಟನೇ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.

   - ದೃಢೀಕರಿಸಲಾಯಿತು. –

II. ಅನುಸರಣಾ ವರದಿಯ ಅನುಮೋದನೆ

1. ದಿನಾಂಕ 02.12.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ಆರನೇ ವಿಶೇಷ ಸಭೆಯ ಅನುಸರಣಾ ವರದಿಯ ಅನುಮೋದನೆ.

   - ಅನುಮೋದಿಸಲಾಯಿತು.

ಪ್ರಾಸ್ತಾವಿಕ

ಮಾನ್ಯ ಕುಲಪತಿಗಳು ಮಾತನಾಡುತ್ತಾ ಈ ಕೆಳಗಿನ ವಿಷಯಗಳನ್ನು ಸಭೆಗೆ ತಿಳಿಸಿದರು.

1. ಸಭೆ ಪ್ರಾರಂಭವಾಗುವ ಮೊದಲು ಮಂಗಳೂರು ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ತಮ್ಮ ಅಹವಾಲುಗಳನ್ನು ವಿಶ್ವವಿದ್ಯಾನಿಲಯದ ಅಧಿಕಾರಿಗಳ ಮುಂದೆ ಭಿನ್ನವಿಸಿಕೊಂಡಿರುವುದರಿಂದ ವಿದ್ಯಾರ್ಥಿಗಳಿಗೆ ನೀಡಿರುವ ಭರವಸೆಯನ್ನು ಸಭೆಯ ಗಮನಕ್ಕೆ ತಂದರು. ಅದರಂತೆ ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ನಡೆಸಲಾದ ಪದವಿ ಮತ್ತು ಸ್ನಾತಕೋತ್ತರ ಪರೀಕ್ಷೆಗಳಿಗೆ ಸಂಬಂಧಿಸಿದ ಫಲಿತಾಂಶ, ಅಂಕಪಟ್ಟಿ, ಗ್ರೇಸ್ ಮಾರ್ಕ್ಸ್, **Personal Seeing, Revaluation, Scholarship** ಗೆ ಸಂಬಂಧಪಟ್ಟ ವಿಚಾರಗಳನ್ನು ವಿಸ್ತಾರವಾಗಿ ಸಭೆಗೆ ತಿಳಿಸುವಂತೆ ಮಾನ್ಯ ಕುಲಪತಿಗಳು ಕುಲಸಚಿವರು (ಪರೀಕ್ಷಾಂಗ) ಇವರಿಗೆ ತಿಳಿಸಿದರು. ಅಲ್ಲದೆ ಈಗಾಗಲೇ ನಡೆದಿರುವ ಸೆಮೆಸ್ಟರ್ ಪರೀಕ್ಷೆಗಳ **Personal Seeing, Revaluation, Grace Marks** ಗಳ ಫಲಿತಾಂಶವನ್ನು ನೀಡದೆ ಮುಂದಿನ ಸೆಮೆಸ್ಟರ್ ಪರೀಕ್ಷೆಗಳಿಗೆ ನೋಂದಣಿ ಮಾಡುವಂತೆ ಅಧಿಸೂಚನೆ ಹೊರಡಿಸಿರುವುದು ವಿದ್ಯಾರ್ಥಿಗಳಲ್ಲಿ ಗೊಂದಲವನ್ನು ಉಂಟು ಮಾಡಿರುವುದರಿಂದ ಈ ಬಗ್ಗೆ ಸೂಕ್ತ ಸ್ಪಷ್ಟನೆ ನೀಡುವಂತೆಯೂ ತಿಳಿಸಿದರು.

   ಕುಲಸಚಿವರು (ಪ) ಪರೀಕ್ಷೆ ಮತ್ತು ಫಲಿತಾಂಶಗಳಿಗೆ ಸಂಬಂಧಿಸಿ ಈವರೆಗಿನ ಪ್ರಕ್ರಿಯೆಯನ್ನು ಸಭೆಗೆ ವಿಸ್ತಾರವಾಗಿ ತಿಳಿಸುತ್ತಾ, **UUCMS** ರಾಜ್ಯ ಮಟ್ಟದ ಸಭೆಯಲ್ಲಿಯೂ ಭಾಗವಹಿಸಿದ್ದು, ಮಾಹಿತಿಯನ್ನು ಸಭೆಗೆ ನೀಡಿದರು.

   a. **Personal Seeing, Revaluation, Grace Marks** ಗಳಿಗೆ ಸಂಬಂಧಿಸಿ, **UUCMS** ತಂತ್ರಾಂಶದಲ್ಲಿ ಆಗಿರುವ ತೊಂದರೆಯನ್ನು ಸಭೆಯ ಗಮನಕ್ಕೆ ತರುತ್ತಾ, ಸಮಸ್ಯೆಯನ್ನು ಬಗೆಹರಿಸಲು ಕೈಗೊಂಡಿರುವ ಕ್ರಮಗಳನ್ನು ಸಭೆಯ ಗಮನಕ್ಕೆ ತಂದರು. ಸ್ನಾತಕೋತ್ತರ ಕಾರ್ಯಕ್ರಮಗಳಲ್ಲಿ ಕೆಲವೊಂದು ಕಾರ್ಯಕ್ರಮಗಳ ಫಲಿತಾಂಶ ಪ್ರಕಟಿಸಲು ವಿಳಂಬವಾಗಿರುವುದಕ್ಕೆ ಕಾರಣಗಳನ್ನು ತಿಳಿಸುತ್ತಾ, ಶೀಘ್ರದಲ್ಲಿ ಸಮಸ್ಯೆಗಳನ್ನು ಬಗೆಹರಿಸಿ

ಫಲಿತಾಂಶ ಪ್ರಕಟಿಸುವುದಾಗಿ ಸಭೆಗೆ ತಿಳಿಸಿದರು.

b. ರಾಷ್ಟ್ರೀಯ ಶಿಕ್ಷಣ ನೀತಿ **2020**ರನ್ವಯ ಪದವಿ ಕಾರ್ಯಕ್ರಮಗಳ ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳನ್ನು ಸರಕಾರದ ನಿರ್ದೇಶನದಂತೆ ವಿತರಿಸಲು ಕ್ರಮಕೈಗೊಳ್ಳುವುದಾಗಿ ಕುಲಸಚಿವರು (ಪರೀಕ್ಷಾಂಗ) ಇವರು ಸಭೆಗೆ ತಿಳಿಸಿದರು.

c. **UUCMS** ತಂತ್ರಾಂಶದಲ್ಲಿ **Personal Seeing** ಗೆ ಅವಕಾಶ ಕಲ್ಪಿಸದಿರುವುದರಿಂದ **Personal Seeing** ಗೆ ಅರ್ಜಿಸಲ್ಲಿಸಿರುವ ವಿದ್ಯಾರ್ಥಿಗಳಿಗೆ ಈ ಹಿಂದಿನ ಪ್ರಕ್ರಿಯೆಯಂತೆ ತಮ್ಮ ಉತ್ತರ ಪತ್ರಿಕೆಗಳನ್ನು ಪರಿಶೀಲಿಸಲು ಅವಕಾಶ ಕಲ್ಪಿಸಿ, ಸದರಿ ಪ್ರಕ್ರಿಯೆಯ ವೀಡಿಯೋ ಚಿತ್ರೀಕರಣವನ್ನು ಮಾಡಿಕೊಂಡು ವಿದ್ಯಾರ್ಥಿಗಳಿಗೆ ಸಹಕರಿಸಬಹುದೆಂಬುದಾಗಿ ಸಿಂಡಿಕೇಟು ಅಭಿಪ್ರಾಯಪಟ್ಟಿತು.

d. ಪ್ರಸ್ತುತ **UUCMS** ತಂತ್ರಾಂಶದಲ್ಲಿ ಪರೀಕ್ಷಾ ಕಾರ್ಯಗಳಿಗೆ ಸಂಬಂಧಿಸಿ ಕಾರ್ಯನಿರ್ವಹಿಸುವ ಸ್ವಾತಂತ್ರ್ಯವನ್ನು ವಿಶ್ವವಿದ್ಯಾನಿಲಯಕ್ಕೆ ನೀಡಿದಲ್ಲಿ ವಿಶ್ವವಿದ್ಯಾನಿಲಯದ ವಿನಿಯಮಗಳ ಪ್ರಕಾರ ಪರೀಕ್ಷಾ ಕಾರ್ಯ ಮತ್ತು ಫಲಿತಾಂಶಗಳನ್ನು ಕ್ಲಪ್ತ ಸಮಯಯದಲ್ಲಿ ಪ್ರಕಟಿಸಲು ಸಾಧ್ಯವಾಗುವುದೆಂಬುದಾಗಿ ಸಭೆಯಲ್ಲಿ ಅಭಿಪ್ರಾಯ ವ್ಯಕ್ತಪಡಿಸಲಾಯಿತು.

e. ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿ, **UUCMS** ತಂತ್ರಾಂಶದಲ್ಲಿ ಏನಾದರೂ ತಾಂತ್ರಿಕ ತೊಂದರೆಗಳು ಎದುರಾದಲ್ಲಿ ಕೂಡಲೇ ಸರಕಾರದ ಸಂಬಂಧಿತ ಇಲಾಖೆಯೊಂದಿಗೆ ಚರ್ಚಿಸಿ, ಬಗೆಹರಿಸಲು ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

f. ಏಕಕಾಲದಲ್ಲಿ **UUCMS** ತಂತ್ರಾಂಶ ಮತ್ತು ವಿಶ್ವವಿದ್ಯಾನಿಲಯದ ಪರೀಕ್ಷಾ ಕೈಪಿಡಿಯ ಪ್ರಕಾರ **manual** ಆಗಿ ಕಾರ್ಯ ನಿರ್ವಹಿಸಿಕೊಂಡು ಕ್ಲಪ್ತ ಸಮಯಕ್ಕೆ ಫಲಿತಾಂಶ ನೀಡಲು ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

g. ಮಂಗಳೂರು ವಿಶ್ವವಿದ್ಯಾನಿಲಯ ಪದವಿ ಕಾರ್ಯಕ್ರಮಗಳಿಗೆ ಸಂಬಂಧಿಸಿ, ಬಾಕಿಯಿರುವ ಅಂಕಪಟ್ಟಿಗಳನ್ನು ವಿದ್ಯಾರ್ಥಿಗಳಿಗೆ ಕೂಡಲೇ ವಿತರಿಸಲು ಕ್ರಮಕೈಗೊಳ್ಳಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು. ಫೆಬ್ರವರಿ **10, 2023**ರೊಳಗೆ ಎಲ್ಲಾ ಅಂಕಪಟ್ಟಿಗಳನ್ನು ಕಾಲೇಜುಗಳಿಗೆ ಕಳುಹಿಸಲು ಸೂಕ್ತ ಕ್ರಮಕೈಗೊಳ್ಳಬೇಕೆಂಬುದಾಗಿ ನಿರ್ಣಯಿಸಿ, ವರದಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ನಿರ್ಣಯಿಸಿತು.

h. ವಿದ್ಯಾರ್ಥಿಗಳಿಗೆ ಅಂಕಪಟ್ಟಿಗಳ ಅಗತ್ಯತೆಯಿರುವುದರಿಂದ ತುರ್ತಾಗಿ **Provisional Marks Card** ಗಳನ್ನು ಒದಗಿಸಲು ಕ್ರಮ ಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

i. ಡಿಜಿಟಲ್ ಪ್ರತಿಯಲ್ಲಿ ಅಂಕಪಟ್ಟಿಗಳನ್ನು ವಿದ್ಯಾರ್ಥಿಗಳಿಗೆ ಒದಗಿಸಲು ಮತ್ತು **digilocker** ನಲ್ಲಿ ವಿದ್ಯಾರ್ಥಿಗಳ ಫಲಿತಾಂಶವನ್ನು ಲಭ್ಯವಾಗುವಂತೆ ಸೂಕ್ತಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

j. ಈ ಎಲ್ಲಾ ಪ್ರಕ್ರಿಯೆಗಳು ಮತ್ತು ತತ್ಸಂಬಂಧ ಕೈಗೊಂಡಿರುವ ಕಾರ್ಯಯೋಜನೆಗಳನ್ನು ವಿದ್ಯಾರ್ಥಿಗಳಿಗೆ ತಲುಪಿಸುವ ಸಲುವಾಗಿ ಸಿಂಡಿಕೇಟು ಸದಸ್ಯರುಗಳು, ಪ್ರಾಂಶುಪಾಲರುಗಳು ಹಾಗೂ ವಿದ್ಯಾರ್ಥಿ ಪ್ರತಿನಿಧಿಗಳನ್ನೊಳಗೊಂಡ ಹಾಗೂ ಇತರೇ ಶಿಕ್ಷಕ ಸಂಘದ ಪದಾಧಿಕಾರಿಗಳನ್ನೊಳಗೊಂಡು ಸಭೆಯನ್ನು ನಡೆಸಲು ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

2. ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸ್ತುತ ಹಾಸ್ಟೆಲ್ ವಿದ್ಯಾರ್ಥಿಗಳಿಂದ ಸಂಗ್ರಹಿಸುತ್ತಿರುವ ಎಸ್ಟಾಬ್ಲಿಷ್‌ಮೆಂಟ್ charges ನ್ನು ಕೈಬಿಡಬೇಕೆಂಬುದಾಗಿ ವಿದ್ಯಾರ್ಥಿಗಳು ಮಾಡಿಕೊಂಡಿರುವ ಮನವಿಗೆ ಸಂಬಂಧಿಸಿ, ಈ ಬಗ್ಗೆ ಶುಲ್ಕ ಪರಿಷ್ಕರಣಾ ಸಮಿತಿಯ ಅಭಿಪ್ರಾಯವನ್ನು ಪಡೆದುಕೊಂಡು ಮುಂದಿನ ಕ್ರಮ ಕೈಗೊಳ್ಳಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ವಿಶ್ವವಿದ್ಯಾನಿಲಯದ ವಸತಿ ನಿಲಯಗಳಲ್ಲಿನ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸುವ ಸಲುವಾಗಿ ಕುಲಪತಿ, ಕುಲಸಚಿವರು, ಕಾರ್ಯಕಾರಿ ಅಭಿಯಂತರರು, ನಿಲಯಪಾಲಕರು ಮತ್ತು ಇತರೆ ಸಂಬಂಧಿತ ಅಧಿಕಾರಿಗಳನ್ನೊಳಗೊಂಡ ಸಮಿತಿಯು ಎಲ್ಲಾ ವಸತಿ ನಿಲಯಗಳಿಗೆ ಭೇಟಿ ನೀಡುವುದಾಗಿ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

3. ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜಾದ ವಿಶ್ವವಿದ್ಯಾನಿಲಯದ ಕಾಲೇಜು, ಮಂಗಳೂರು ಇಲ್ಲಿಗೆ ದಿನಾಂಕ **01.02.2023** ಮತ್ತು **02.02.2023**ರಂದು ನ್ಯಾಕ್ ಭೇಟಿ ನೀಡಲಿರುವ ವಿಷಯವನ್ನು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

4. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ವಿವೇಕಾನಂದ ಪ್ರತಿಮೆ ಅನಾವರಣದ ವಿಷಯಕ್ಕೆ ಸಂಬಂಧಿಸಿ, ಈವರೆಗಿನ ಪ್ರಕ್ರಿಯೆಯನ್ನು ಕುಲಸಚಿವರು ಸಭೆಗೆ ತಿಳಿಸಿದರು. ಮಾರ್ಚ್ 12, 2023ರಂದು ಪ್ರತಿಮೆಯನ್ನು ಉದ್ಘಾಟಿಸಬೇಕಾಗಿರುವುದರಿಂದ ಸದರಿ ದಿನಾಂಕದೊಳಗಾಗಿ ಪ್ರತಿಮೆ ಸ್ಥಾಪನೆಯ ಕಾರ್ಯವನ್ನು ಪೂರ್ಣಗೊಳಿಸುವುದಾಗಿ ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

5. ಮಂಗಳೂರು ವಿಶ್ವವಿದ್ಯಾನಿಲಯದ ಮೂರು ಘಟಕ ಕಾಲೇಜುಗಳ ಸ್ಥಾಪನೆಗೆ ಸಂಬಂಧಿಸಿದ ಪರಿನಿಯಮಗಳಿಗೆ ಸರಕಾರದಿಂದ ಅನುಮೋದನೆಯನ್ನು ಶೀಘ್ರದಲ್ಲಿ ಪಡೆಯಲು ಸೂಕ್ತ ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

**III. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು.**

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಎಸಿಸಿ:ಸಾ.ಸ.1:1 (2023)** |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಅಧೀನದಲ್ಲಿರುವ ಸ್ವಾಯತ್ತ ಕಾಲೇಜುಗಳನ್ನು ನಿಯಂತ್ರಿಸುವ ಅನುಶಾಸನದ ತಿದ್ದುಪಡಿ ಬಗ್ಗೆ. |
| ನಿರ್ಣಯ: | ತಿದ್ದುಪಡಿ ಪರಿನಿಯಮವನ್ನು ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಎಸಿಸಿ:ಸಾ.ಸ.1:2 (2023)** |
| ವಿಷಯ: | **Dr. M.V. Shetty College of Speech & Hearing,** ಮಂಗಳೂರು ಇಲ್ಲಿರುವ **Speech & Hearing,** ವಿಭಾಗವನ್ನು ಪಿಹೆಚ್.ಡಿ. ವ್ಯಾಸಂಗಕ್ಕೆ ಸಂಶೋಧನಾ ಕೇಂದ್ರವನ್ನಾಗಿ ಮಾನ್ಯತೆ ನೀಡುವ ಬಗ್ಗೆ. |
| ನಿರ್ಣಯ: | ನಿಯಮಾನುಸಾರವಾಗಿ ಅನುಮೋದಿಸಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಸಿಂಡಿಕೇಟು:ಸಾ.ಸ.1:3 (2023)** |
| ವಿಷಯ: | ಸ್ನಾತಕೋತ್ತರ ಇತಿಹಾಸ ಮತ್ತು ಪುರಾತತ್ವಶಾಸ್ತ್ರ ಅಧ್ಯಯನ ಮಂಡಳಿಯ ಪುನರ್ರಚನೆಯ ಬಗ್ಗೆ. |
| ನಿರ್ಣಯ: | ಸ್ನಾತಕೋತ್ತರ ಇತಿಹಾಸ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಸಿಬ್ಬಂದಿ:ಸಾ.ಸ.1:4 (2023)** |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಯೋಜನೆ, ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಮಂಡಲಿಯ ನಿರ್ದೇಶಕರನ್ನು ನೇಮಕ ಮಾಡುವ ಬಗ್ಗೆ. |
| ನಿರ್ಣಯ: | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಹಿರಿಯ ಪ್ರಾಧ್ಯಾಪಕರುಗಳ ಪೈಕಿ ಮೂರು ಹೆಸರುಗಳನ್ನು ಸೂಚಿಸಿ, ಮುಂದಿನ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| **ಕಾರ್ಯಸೂಚಿ ಸಂಖ್ಯೆ:** | **ಸಿಬ್ಬಂದಿ:ಸಾ.ಸ.1:5 (2023)** |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಸೇವೆಗೈದು ನೇರ ನೇಮಕಾತಿಯಡಿ ನೇಮಕಗೊಂಡ/ಖಾಯಂ ಸೇವೆಗೆ ವಿಲೀನಗೊಳಿಸಲಾದ ಸಿಬ್ಬಂದಿಗಳ ಖಾಯಂಪೂರ್ವದ ಸೇವಾವಧಿಯನ್ನು ವೇತನ ಭಡ್ತಿ, ರಜೆ, ಪಿಂಚಣಿ/ಉಪದಾನ ಇತ್ಯಾದಿ ಸೌಲಭ್ಯಗಳಿಗೆ ಪರಿಗಣಿಸುವ ಬಗ್ಗೆ. |

| | |
|---|---|
| ನಿರ್ಣಯ: | ಸೂಕ್ತ ಕಾನೂನು ಸಲಹೆ ಪಡೆದುಕೊಂಡು, ವಿಸ್ತೃತ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ಕ್ರಮಕೈಗೊಳ್ಳಬೇಕೆಂಬುದಾಗಿ ನಿರ್ಣಯಿಸಲಾಯಿತು. |
| ಕಾರ್ಯಸೂಚಿ ಸಂಖ್ಯೆ: | ಡಿಇವಿ:ಸಾ.ಸ.**1:6 (2023)** |
| ವಿಷಯ: | ಖಾಸಗಿ ಕಟ್ಟಡದಲ್ಲಿ ನಡೆಸಲಾಗುತ್ತಿರುವ ಮಂಗಳೂರು ವಿಶ್ವವಿದ್ಯಾನಿಲಯದ ನೆಲ್ಯಾಡಿ ಘಟಕ ಕಾಲೇಜಿನ ಬಾಡಿಗೆ ಕರಾರನ್ನು **2022-23**ನೇ ಸಾಲಿಗೆ ಮುಂದುವರಿಸುವ ಕುರಿತು. |
| ನಿರ್ಣಯ: | ವಿದ್ಯುತ್ ಬಿಲ್ಲನ್ನು ಮಂಗಳೂರು ವಿಶ್ವವಿದ್ಯಾನಿಲಯವೇ ಭರಿಸಿಕೊಂಡು, ಶೇಕಡಾ **5**ರಷ್ಟು ಬಾಡಿಗೆಯನ್ನು ಹೆಚ್ಚಿಸಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |
| ಕಾರ್ಯಸೂಚಿ ಸಂಖ್ಯೆ: | ಪರೀಕ್ಷಾಂಗ:ಸಾ.ಸ.**1:7 (2023)** |
| ವಿಷಯ: | ಎಪ್ರಿಲ್/ಮೇ **2022**ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ / ಸ್ನಾತಕೋತ್ತರ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು – ದಂಡನೆಯನ್ನು ದೃಢಪಡಿಸುವ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |
| ಕಾರ್ಯಸೂಚಿ ಸಂಖ್ಯೆ: | ಪರೀಕ್ಷಾಂಗ:ಸಾ.ಸ.**1:8 (2023)** |
| ವಿಷಯ: | ಎಪ್ರಿಲ್/ಮೇ **2022**ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ / ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ. |
| ನಿರ್ಣಯ: | ಅನುಮೋದಿಸಲಾಯಿತು. |
| ಕಾರ್ಯಸೂಚಿ ಸಂಖ್ಯೆ: | ಸಿಂಡಿಕೇಟು:ಸಾ.ಸ.**1:9 (2023)** |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಸಮಿತಿಗೆ ಸಿಂಡಿಕೇಟ್‌ನಿಂದ ಓರ್ವ ಸದಸ್ಯರ ನಾಮನಿರ್ದೇಶನದ ಬಗ್ಗೆ. |
| ನಿರ್ಣಯ: | ಹಣಕಾಸು ಸಮಿತಿಗೆ ಸಿಂಡಿಕೇಟಿನಿಂದ ಶ್ರೀ ರವಿಚಂದ್ರ ಪಿ.ಎಂ. ಇವರನ್ನು ಸರ್ವಾನುಮತದಿಂದ ನಾಮನಿರ್ದೇಶನ ಮಾಡಲಾಯಿತು. |
| ಕಾರ್ಯಸೂಚಿ ಸಂಖ್ಯೆ: | ಪರೀಕ್ಷಾಂಗ:ಸಾ.ಸ.**1:10 (2023)** |

| | |
|---|---|
| ವಿಷಯ: | ಪರೀಕ್ಷಾಂಗ ವಿಭಾಗದ Workstations, Computers and Laptops / Printer ಖರೀದಿ ಬಗ್ಗೆ. |
| ನಿರ್ಣಯ: | ದಿನಾಂಕ 19.01.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಪರೀಕ್ಷಾಂಗ:ಸಾ.ಸ.1:11 (2023) |
| ವಿಷಯ: | ಪದವಿ ಪರೀಕ್ಷೆಯ ಡಿಜಿಟಲ್ ಪ್ಲೂಯಿನ್ಸಿ (Digital Fluency) ಉತ್ತರ ಪತ್ರಿಕೆಯ ಸಂಖ್ಯೆ ಮತ್ತು ದರ ನಿಗದಿಪಡಿಸುವ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಪರೀಕ್ಷಾಂಗ:ಸಾ.ಸ.1:12 (2023) |
| ವಿಷಯ: | ಪರೀಕ್ಷಾ ಕಾರ್ಯಗಳ ಸಂಭಾವನೆ / ದಿನಭತ್ಯೆ ದರಗಳನ್ನು ಪರಿಷ್ಕರಿಸುವ ಬಗ್ಗೆ. |
| ನಿರ್ಣಯ: | ಪ್ರಸ್ತಾವನೆಗೆ ಸಂಬಂಧಿಸಿ, ರಾಜ್ಯದ ಇತರ ವಿಶ್ವವಿದ್ಯಾನಿಲಯಗಳ ಮಾಹಿತಿಗಳನ್ನು ಕ್ರೋಢೀಕರಿಸಿಕೊಂಡು, ಸಮಗ್ರ ಮಾಹಿತಿಯೊಂದಿಗೆ ಸಮಿತಿಗೆ ಮಂಡಿಸಿ, ಸಮಿತಿಯ ಶಿಫಾರಸ್ಸುಗಳನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.<br>ಸಮಿತಿ ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಪರೀಕ್ಷಾಂಗ:ಸಾ.ಸ.1:13 (2023) |
| ವಿಷಯ: | ದಿನಾಂಕ 01-07-2022ರವರೆಗಿನ ಬಿ.ಎ./ ಬಿ.ಎಸ್ಸಿ./ ಬಿ.ಕಾಂ. /ಬಿ.ಎಸ್.ಎಂ./ ಬಿ.ಎಸ್ಸಿ. (ಹೆಚ್.ಎಸ್.)/ಬಿ.ಸಿ.ಎ./ ಬಿ.ಎಸ್ಸಿ. (ಫ್ಯಾಷನ್ ಡಿಸೈನ್)/ ಬಿ.ಎಸ್ಸಿ. (ಇಂಟೀರಿಯರ್ ಡಿಸೈನ್ & ಡೆಕೋರೇಶನ್)/ಬಿ.ಪಿ.ಎಡ್. /ಬಿ.ಎಸ್ಸಿ.(ಎಫ್ .ಎನ್.ಡಿ.)/ಬಿ.ಎ.ಎಸ್.ಎಲ್.ಪಿ. ಇತ್ಯಾದಿ ಪದವಿ ಕಾರ್ಯಕ್ರಮಗಳಿಗೆ ಸಂಬಂಧಿಸಿದಂತೆ ಅಧ್ಯಾಪಕರ ಜೇಷ್ಠತಾ ಪಟ್ಟಿ ಅನುಮೋದನೆ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು.<br>ವಿಷಯವಾರು ಅಧ್ಯಾಪಕರ ಜೇಷ್ಟತಾ ಪಟ್ಟಿಯನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಿ, ಮಾಹಿತಿಯನ್ನು ಎಲ್ಲಾ ಕಾಲೇಜುಗಳಿಗೆ ನೀಡಿ ತಿದ್ದುಪಡಿಗಳಿದ್ದಲ್ಲಿ ಸರಿಪಡಿಸಿಕೊಂಡು ಅಂತಿಮ ಜೇಷ್ಟತಾ ಪಟ್ಟಿಯನ್ನು ಪ್ರಕಟಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.1:14 (2023) |
| ವಿಷಯ: | ಶ್ರೀಮತಿ ವಿಜೇತ ವಿ.ಬಿ., ಗ್ರಂಥಾಲಯ ಸಹಾಯಕರು ಗ್ರೇಡ್-2, ತುಮಕೂರು ವಿಶ್ವವಿದ್ಯಾನಿಲಯ, ಇವರನ್ನು ನಿಯೋಜನೆ ಮೇರೆಗೆ ದ್ವಿತೀಯ ದರ್ಜೆ ಸಹಾಯಕರ ವೇತನ ಶ್ರೇಣಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೇಮಿಸಿರುವ ಬಗ್ಗೆ. |
| ನಿರ್ಣಯ: | ಗಮನಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.1:15 (2023) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯಕಾರಿ ಅಭಿಯಂತರರ ನೇಮಕ – ಘಟನೋತ್ತರ ಅನುಮೋದನೆ ಬಗ್ಗೆ. |
| ನಿರ್ಣಯ: | ಘಟನೋತ್ತರವಾಗಿ ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.1:16 (2023) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಸೂಕ್ಷ್ಮಾಣು ಜೀವವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಶ್ರೀನಾಥ್ ಬಿ.ಎಸ್. ಇವರಿಗೆ ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಖಾಲಿ ಇರುವ ಹುದ್ದೆಗೆ ವರ್ಗಾಯಿಸುವ ಕುರಿತು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.1:17 (2023) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಜೀವರಸಾಯನಶಾಸ್ತ್ರ ವಿಭಾಗ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇಲ್ಲಿ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿರುವ ಡಾ.ಕೆ.ಎಸ್. ಚಂದ್ರಶೇಖರಯ್ಯ ಇವರಿಗೆ ಬೆಂಗಳೂರು ವಿಶ್ವವಿದ್ಯಾನಿಲಯದ ಜೀವರಸಾಯನಶಾಸ್ತ್ರ ವಿಭಾಗದಲ್ಲಿ ಖಾಲಿಯಿರುವ ಹುದ್ದೆಗೆ ವರ್ಗಾಯಿಸುವ ಕುರಿತು ನಿರಾಕ್ಷೇಪಣಾ ಪತ್ರ ನೀಡುವ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.1:18 (2023) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಿಯೋಜನೆ ಮೇರೆಗೆ ವಿಶೇಷಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ಆಡಳಿತದಲ್ಲಿ ಸಲ್ಲಿಸಿದ ಸೇವೆಯ ನಿಯೋಜನೆಯ ಅವಧಿಯನ್ನು ಶ್ರೇಣಿಕರಣದ (ಎ.ಪಿ.ಎ. ಅಂಕ) ಮೌಲ್ಯಮಾಪನಕ್ಕಾಗಿ ಲೆಕ್ಕಾಚಾರ ಮಾಡುವ ಬಗ್ಗೆ. |
| ನಿರ್ಣಯ: | ಈ ಬಗ್ಗೆ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ಬೆಂಗಳೂರು ಇಲ್ಲಿಂದ ಮಾಹಿತಿಯನ್ನು ಪಡೆದುಕೊಂಡು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಡಿಇವಿ:ಸಾ.ಸ.1:19 (2023) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Heartfulness Chair ಸ್ಥಾಪಿಸುವ ಕುರಿತು. |
| ನಿರ್ಣಯ: | ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಆಡಳಿತ:ಸಾ.ಸ.1:20 (2023) |
| ವಿಷಯ: | ದಿವಂಗತ ಡಾ.ಕೆ.ಸಿ. ಪುಷ್ಪಲತ, ಸಹ ಪ್ರಾಧ್ಯಾಪಕರು, ಸೂಕ್ಷ್ಮಾಣುಜೀವ ವಿಜ್ಞಾನ ವಿಭಾಗ, ಸ್ನಾತಕೋತ್ತರ ಕೇಂದ್ರ, ಚಿಕ್ಕ ಅಳುವಾರ ಇವರ ವೈದ್ಯಕೀಯ ವೆಚ್ಚ ಮರುಭರಣೆ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಾರ್ವತ್ರಿಕ:ಸಾ.ಸ.1:21 (2023) |
| ವಿಷಯ: | ವಿವೇಕಾನಂದ ಕಾಲೇಜ್ ಆಫ್ ಇಂಜಿನಿಯರಿಂಗ್ & ಟೆಕ್ನಾಲಜಿ, ಪುತ್ತೂರು ಇಲ್ಲಿ ಆಯೋಜಿಸಲಿರುವ ಮೂರು ದಿನಗಳ ಕೃಷಿ ಯಂತ್ರ ಮೇಳದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಿಂದ ಸಹಯೋಗ ನೀಡುವ ಬಗ್ಗೆ. |
| ನಿರ್ಣಯ: | ಪ್ರಸ್ತಾವನೆಯನ್ನು ಚರ್ಚಿಸಲಾಯಿತು. ರೂ.6,00,000.00 (ರೂಪಾಯಿ ಆರು ಲಕ್ಷಗಳು ಮಾತ್ರ) ಮೊತ್ತವನ್ನು ಮಂಜೂರು ಮಾಡಬಹುದೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.<br>ಇನ್ನು ಮುಂದಕ್ಕೆ ವಿಶ್ವವಿದ್ಯಾನಿಲಯದ ಸಹಯೋಗದೊಂದಿಗೆ ನಡೆಸುವ ಕಾರ್ಯಕ್ರಮಗಳಿಗೆ ಸಂಬಂಧಿಸಿ ವಿಶ್ವವಿದ್ಯಾನಿಲಯದಿಂದ ದೇಣಿಗೆಗಳನ್ನು ನೀಡಲು ಆಯವ್ಯಯದಲ್ಲಿ ಸೂಕ್ತ ಲೆಕ್ಕ ಶೀರ್ಷಿಕೆಗಳನ್ನು ಸೃಜಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಮುಂದುವರಿದು, ಸದರಿ ದೇಣಿಗೆಗಳ ಮೊತ್ತವು ಆರ್ಥಿಕ ವರ್ಷದಲ್ಲಿ ರೂ.10,00,000.00 (ರೂಪಾಯಿ ಹತ್ತು ಲಕ್ಷಗಳು ಮಾತ್ರ)ಕ್ಕೆ ಸೀಮಿತಗೊಳಿಸಬೇಕೆಂಬುದಾಗಿಯೂ ಸಿಂಡಿಕೇಟು ನಿರ್ಣಯಿಸಿತು. |

ಕಾರ್ಯಸೂಚಿ ಸಂಖ್ಯೆ: ಆಡಳಿತ:ಸಾ.ಸ.1:22 (2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳು / ಕಛೇರಿಗಳಲ್ಲಿ ಅಳವಡಿಸಲಾಗಿರುವ ಕಂಪ್ಯೂಟರ್/ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆಯ ಬಗ್ಗೆ.

ನಿರ್ಣಯ: ದಿನಾಂಕ 19.01.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪ.ಜಾ.ಪ.ಪಂ.ಘಟಕ:ಸಾ.ಸ.1:23 (2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಪರಿಶಿಷ್ಠ ಜಾತಿ / ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಒದಗಿಸುವ ಕುರಿತು.

ನಿರ್ಣಯ: ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.1:24 (2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಿರಿಯ ಅಭಿಯಂತರರ ಹುದ್ದೆಗೆ ಮುಂಭಡ್ತಿ ನೀಡಿರುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಸುಧೀರ್ಘವಾಗಿ ಚರ್ಚಿಸಲಾಯಿತು. ಅಂತಿಮವಾಗಿ, ಈ ಬಗ್ಗೆ ಪರಿಶೀಲಿಸಲು ಕೆಳಕಂಡ ಸಮಿತಿಯನ್ನು ರಚಿಸಲಾಯಿತು.

1. ಶ್ರೀ ರವಿಚಂದ್ರ ಪಿ. ಎಂ. — ಅಧ್ಯಕ್ಷರು
   ಸಿಂಡಿಕೇಟು ಸದಸ್ಯರು
2. ಉಪನಿರ್ದೇಶಕರು, — ಸದಸ್ಯರು
   ಸಮಾಜ ಕಲ್ಯಾಣ ಇಲಾಖೆ, ಮಂಗಳೂರು
3. ಶ್ರೀ ತಿಪ್ಪೇಸ್ವಾಮಿ, — ಸದಸ್ಯರು
   ವಿಷಯ ತಜ್ಞರು,
   ವಿಶೇಷಾಧಿಕಾರಿ, ನೃಪತುಂಗ ವಿಶ್ವವಿದ್ಯಾನಿಲಯ
4. ಉಪಕುಲಸಚಿವರು — ಸಂಚಾಲಕರು
   ಸಿಬ್ಬಂದಿ ವಿಭಾಗ, ಕುಲಸಚಿವರ ಕಛೇರಿ

ವರದಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸುವುದು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.1:25 (2023)

ವಿಷಯ: ಪದವಿ ಮತ್ತು ಸ್ನಾತಕೋತ್ತರ ದೃಶ್ಯಕಲಾ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್‌ರಚಿಸುವ ಬಗ್ಗೆ.

ನಿರ್ಣಯ: ಪದವಿ ಮತ್ತು ಸ್ನಾತಕೋತ್ತರ ದೃಶ್ಯಕಲಾ ಸಂಯುಕ್ತ ಅಧ್ಯಯನ ಮಂಡಳಿಯನ್ನು ಪುನರ್ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

ಕಾರ್ಯಸೂಚಿ ಸಂಖ್ಯೆ: **ಸಿಂಡಿಕೇಟು:ಸಾ.ಸ.1:26 (2023)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗಕ್ಕೆ ಅಧ್ಯಕ್ಷರ ನೇಮಕಾತಿ ಬಗ್ಗೆ.

ನಿರ್ಣಯ: ಸ್ನಾತಕೋತ್ತರ ಇತಿಹಾಸ ಅಧ್ಯಯನ ವಿಭಾಗಕ್ಕೆ ಡಾ. ತ್ರಿವೇಣಿ, ಸಹ ಪ್ರಾಧ್ಯಾಪಕರು ಇವರನ್ನು ದಿನಾಂಕ **01.01.2023**ರಿಂದ ಅನ್ವಯವಾಗುವಂತೆ ಮುಂದಿನ ಎರಡು ವರ್ಷಗಳ ಅವಧಿಗೆ ವಿಭಾಗದ ಅಧ್ಯಕ್ಷರನ್ನಾಗಿ ನೇಮಕಾತಿ ಮಾಡಿರುವ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: **ಪರೀಕ್ಷಾಂಗ:ಸಾ.ಸ.1:27 (2023)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ **41**ನೇ ವಾರ್ಷಿಕ ಘಟಿಕೋತ್ಸವದಲ್ಲಿ ಪ್ರದಾನ ಮಾಡಲಿರುವ ಚಿನ್ನದ ಪದಕಗಳ ತಯಾರಿಕಾ ವೆಚ್ಚಕ್ಕೆ ಅನುಮೋದನೆ ನೀಡುವ ಬಗ್ಗೆ.

ನಿರ್ಣಯ: ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಲು ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸಿಂಡಿಕೇಟು ಅಧಿಕಾರ ನೀಡಿತು.

ಕಾರ್ಯಸೂಚಿ ಸಂಖ್ಯೆ: **ಸಿಬ್ಬಂದಿ:ಸಾ.ಸ.1:28 (2023)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಘಟಕ ಕಾಲೇಜುಗಳಿಗೆ ಪ್ರಭಾರ ಪ್ರಾಂಶುಪಾಲರ ನೇಮಕಾತಿ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: **ಡಿಇವಿ:ಸಾ.ಸ.1:29 (2023)**

ವಿಷಯ: **DST PURSE ಲ್ಯಾಬ್ – LCMS ಉಪಕರಣದ ವಾರ್ಷಿಕ ನಿರ್ವಹಣೆ ಬಗ್ಗೆ.**

ನಿರ್ಣಯ: ದಿನಾಂಕ **19.01.2023**ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: **ಡಿಇವಿ:ಸಾ.ಸ.1:30 (2023)**

ವಿಷಯ: **CARER ಕೇಂದ್ರ–Raddec Pyrolyser-6Trio ಉಪಕರಣದ ವಾರ್ಷಿಕ ನಿರ್ವಹಣೆ ಬಗ್ಗೆ.**

ನಿರ್ಣಯ: ದಿನಾಂಕ **19.01.2023**ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.1:31 (2023)

ವಿಷಯ: **IGCAR MU MoU ಪ್ರಾಜೆಕ್ಟ್ – Procurement of Consumables for C-14 and H-3 Measurements using Liquid Scintillation Spectometer** ಖರೀದಿ ಇಂಡೆಂಟಿನ ಘಟನೋತ್ತರ ಮಂಜೂರಾತಿ ಬಗ್ಗೆ.

ನಿರ್ಣಯ: ದಿನಾಂಕ 19.01.2023ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.1:32 (2023)

ವಿಷಯ: ಸಿಂಡಿಕೇಟು ಸದಸ್ಯರುಗಳಾದ ಪ್ರೊ. ಕರುಣಾಕರ್ ಎ. ಕೋಟೆಗಾರ್ ಮತ್ತು ಶ್ರೀ ರವಿಚಂದ್ರ ಪಿ.ಎಂ. ಇವರುಗಳು ಸಲ್ಲಿಸಿರುವ ಪ್ರಸ್ತಾವನೆ ಬಗ್ಗೆ.

ಪ್ರಸ್ತಾವನೆ 1 **Start a Study Circle on Indian Knowledge system at Mangalore University and all the affiliated Colleges.**

ನಿರ್ಣಯ: ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

ಈ ಬಗ್ಗೆ ಎಲ್ಲಾ ಸಂಯೋಜಿತ ಕಾಲೇಜುಗಳಿಗೆ ಸುತ್ತೋಲೆ ಹೊರಡಿಸಲು ಕ್ರಮಕೈಗೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಮುಂದುವರಿದು, ಪ್ರತಿ ಸಂಯೋಜಿತ ಕಾಲೇಜಿನಿಂದ ಕನಿಷ್ಠ ಇಬ್ಬರು ಅಧ್ಯಾಪಕರುಗಳನ್ನು ಆಹ್ವಾನಿಸಿಕೊಂಡು, ಒಂದು ಕಾರ್ಯಾಗಾರವನ್ನು ಹಮ್ಮಿಕೊಳ್ಳಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು. ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿಯಾಗಿ ಪ್ರೊ. ಕರುಣಾಕರ್ ಎ. ಕೋಟೆಗಾರ್, ಸಿಂಡಿಕೇಟು ಸದಸ್ಯರು ಇವರನ್ನು ಆಹ್ವಾನಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.1:33 (2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ **IT Policy** ಯ ಬಗ್ಗೆ.

ನಿರ್ಣಯ: ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ:ಸಾ.ಸ.1:34 (2023)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿರುವ ವಿವಿಧ ಅಧ್ಯಯನ ಕೇಂದ್ರ / ಪೀಠಗಳ ನಿರ್ದೇಶಕರು / ಸಂಯೋಜಕರುಗಳನ್ನು ನೇಮಕ ಮಾಡುವ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಪ್ರಸ್ತಾವನೆಯನ್ನು ಮುಂದೂಡಲಾಯಿತು. ಸಮಗ್ರ ಮಾಹಿತಿಯೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:ಸಾ.ಸ.1:35 (2023)

| | |
|---|---|
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಕಿರಿಯ ಅಭಿಯಂತರರ ಹುದ್ದೆಯ ವೃಂದ ಮತ್ತು ನೇಮಕಾತಿ ನಿಯಮಗಳ ಕರಡು ಪರಿನಿಯಮದ ಅನುಮೋದನೆ ಬಗ್ಗೆ. |
| ನಿರ್ಣಯ: | ಶೈಕ್ಷಣಿಕ ಮಂಡಳಿ ಮತ್ತು ಹಣಕಾಸು ಸಮಿತಿ ಸಭೆಗಳಲ್ಲಿ ಅನುಮೋದನೆಗೊಳ್ಳುವ ಷರತ್ತಿನ ಮೇರೆಗೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.1:36 (2023) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದ ಉಪಕುಲಸಚಿವ / ಸಮಾನ ವೃಂದದ ಹುದ್ದೆಗಳ ವೃಂದ ಮತ್ತು ನೇಮಕಾತಿ ವಿಧಾನ ಕುರಿತ ಕರಡು ಪರಿನಿಯಮದ ಅನುಮೋದನೆ ಬಗ್ಗೆ. |
| ನಿರ್ಣಯ: | ಶೈಕ್ಷಣಿಕ ಮಂಡಳಿ ಮತ್ತು ಹಣಕಾಸು ಸಮಿತಿ ಸಭೆಗಳಲ್ಲಿ ಅನುಮೋದನೆಗೊಳ್ಳುವ ಷರತ್ತಿನ ಮೇರೆಗೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.1:37 (2023) |
| ವಿಷಯ: | ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಕುಲಸಚಿವರ ಹುದ್ದೆಯ ಸಿಬ್ಬಂದಿಗಳಿಗೆ ಉಪಕುಲಸಚಿವ ಹುದ್ದೆಗೆ ಮುಂಭಡ್ತಿ ನೀಡುವ ಬಗ್ಗೆ. |
| ನಿರ್ಣಯ: | ದಿನಾಂಕ 27.01.2023ರಂದು ನಡೆದ ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಮಂಡಳಿ ಸಭೆಯಲ್ಲಿ ಅರ್ಹ ಸಹಾಯಕ ಕುಲಸಚಿವರ ಸಂದರ್ಶನ ನಡೆಸಿ, ಅಭ್ಯರ್ಥಿಗಳ ಅರ್ಹತೆ, ಸೇವಾ ದಾಖಲೆ, ಸಂದರ್ಶನದ ಕಾರ್ಯಕ್ಷಮತೆಯನ್ನು ಆಧರಿಸಿ ಶ್ರೀಮತಿ ಲಲಿತಾ ಕೆ. ಆರ್. ಮತ್ತು ಶ್ರೀಮತಿ ನಾಗವೇಣಿ ಕೆ., ಇವರುಗಳಿಗೆ ಉಪ ಕುಲಸಚಿವರ ಹುದ್ದೆಗೆ ಮುಂಭಡ್ತಿ ನೀಡಲು ಶಿಫಾರಸ್ಸು ಮಾಡಲಾಗಿರುತ್ತದೆ. ಸದರಿ ಶಿಫಾರಸ್ಸನ್ನು ವಿಶ್ವವಿದ್ಯಾನಿಲಯಗಳ ಕಾಯ್ದೆ ಪ್ರಕರಣ 57(5)ರ ಪ್ರಕಾರ ಈ ಸಿಂಡಿಕೇಟ್ ಸಭೆಯು ಅನುಮೋದಿಸಿದೆ.<br>ಈ ಮುಂಭಡ್ತಿಗಾಗಿ ಈ ಹಿಂದೆಯೇ ಸಿಂಡಿಕೇಟ್ ನಿರ್ಣಯ ಕೈಗೊಂಡಿರುವುದನ್ನು ಇಲ್ಲಿ ಉಲ್ಲೇಖಿಸುತ್ತಾ, ಸಿಂಡಿಕೇಟ್‌ನ ನಿರ್ಣಯವನ್ನು ಜಾರಿಗೆ ತಂದಿರುವ ಮಾನ್ಯ ಕುಲಪತಿಗಳು ಮತ್ತು ನೇಮಕಾತಿ ಮಂಡಳಿಯ ಎಲ್ಲಾ ಸದಸ್ಯರನ್ನು ಈ ಸಿಂಡಿಕೇಟ್ ಸಭೆಯು ಹಾರ್ದಿಕವಾಗಿ ಅಭಿನಂದಿಸುತ್ತದೆ.<br>ಆದರೆ ಇದೇ ವೇಳೆ, ಸಹಾಯಕ ಕುಲಸಚಿವರ ಹುದ್ದೆಯಿಂದ ಉಪಕುಲಸಚಿವರ ಹುದ್ದೆಗೆ ಮುಂಭಡ್ತಿ ನೀಡುವಾಗ ಸರಕಾರದ ಮೇಲೆ ಆರ್ಥಿಕ ಹೊರೆ ಬೀಳುವುದರಿಂದ, ಈ ಮುಂಭಡ್ತಿ ಆದೇಶ ನೀಡಲು ಸರಕಾರದ ಪೂರ್ವಾನುಮತಿ |

ಪಡೆಯಬೇಕು ಎಂಬ ನೇಮಕಾತಿ ಮಂಡಳಿಯ ಕೆಲವು ಸದಸ್ಯರ ಅಭಿಪ್ರಾಯವನ್ನು ಸಿಂಡಿಕೇಟ್ ಸಭೆ ಗಮನಿಸಿತು. ತದನಂತರ ಸಿಂಡಿಕೇಟ್ ಸಭೆಯ ಸದಸ್ಯ ಕಾರ್ಯದರ್ಶಿಯಾಗಿರುವ ಕುಲಸಚಿವರು ಈ ಕೆಳಗಿನಂತೆ ತಮ್ಮ ಅಭಿಪ್ರಾಯ ಹಾಗೂ ನಿಲುವನ್ನು ಸೂಚಿಸಿದರು.

**“Since the selection process is not in accordance with the letter No. E.D.54 USV 2022 dated 12/09/2022, Government of Karnataka, and the majority of the selection committee members expressed their opinion to seek the permission of the government for the said promotion, the promotion order of Deputy Registrars may be issued only after obtaining the necessary permission from the government.”**

ಆದರೆ, ಸಿಂಡಿಕೇಟ್ ಸಭೆಯು ಈ ಕೆಳಗೆ ನೀಡಲಾದ ಕಾರಣಗಳಿಂದ ಮೇಲಿನ ಅಭಿಪ್ರಾಯವು ಸಮಂಜಸವಾದುದಲ್ಲ, ಆದ್ದರಿಂದ ಅದು ಸ್ವೀಕಾರಾರ್ಹವಲ್ಲ ಎಂದು ಅಭಿಪ್ರಾಯ ಪಡುತ್ತದೆ.

1. ಮುಂಭಡ್ತಿ ಎಂಬುದು ಸಿಬ್ಬಂದಿ ಆಡಳಿತದಲ್ಲಿ ಕಾಲಕಾಲಕ್ಕೆ ಅನುಸರಿಸುವ ಸಹಜ ಕಾನೂನು ಪ್ರಕ್ರಿಯೆ. ತೆರವಾದ ಸ್ಥಾನಗಳನ್ನು ಭರ್ತಿ ಮಾಡುವುದು, ನೌಕರರ ಕಾನೂನು ಬದ್ಧ ಹಕ್ಕುಗಳನ್ನು ರಕ್ಷಿಸುವಲ್ಲಿ ಮತ್ತು ಆಡಳಿತವನ್ನು ಇನ್ನಷ್ಟು ಹೆಚ್ಚು ಕ್ರಿಯಾಶೀಲವಾಗಿ ಉತ್ತೇಜಿಸುವಲ್ಲಿ ಅಗತ್ಯವಾದ ಆಡಳಿತಾತ್ಮಕ ಕ್ರಮ. ಎಲ್ಲಾ ಹುದ್ದೆಗಳ ಮುಂಭಡ್ತಿಗಳಲ್ಲೂ ಸರಕಾರದ ಮೇಲೆ ಆರ್ಥಿಕ ಹೊರೆ ಬೀಳುತ್ತದೆ. ಇದರಲ್ಲಿ ಏನೂ ವಿಶೇಷ ಇಲ್ಲ ಆದ್ದರಿಂದ.....
2. ವಿಶ್ವವಿದ್ಯಾನಿಲಯವು ತನ್ನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗಳಿಗೆ ನಿಯಮಾನುಸಾರ ಕಾಲಕಾಲಕ್ಕೆ ಮುಂಭಡ್ತಿಗಳನ್ನು ನೀಡುತ್ತಿದೆ. ಯಾವುದೇ ಮುಂಭಡ್ತಿಗೆ ಸರಕಾರದ ಪೂರ್ವಾನುಮತಿ ಪಡೆಯಬೇಕು ಎಂಬುದು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಕಾಯ್ದೆ, ಪರಿನಿಯಮಗಳಿಗೆ ವ್ಯತಿರಿಕ್ತವಾದುದು, ಆದ್ದರಿಂದ.....
3. ‘ಸಹಾಯಕ ಕುಲಸಚಿವ ಹುದ್ದೆಯಿಂದ ಉಪಕುಲಸಚಿವರ ಹುದ್ದೆಗೆ ಮುಂಭಡ್ತಿ ನೀಡಲು ಸರಕಾರದ ಪೂರ್ವಾನುಮತಿ ಅತ್ಯಗತ್ಯ. ಆದ್ದರಿಂದ ಅನುಮತಿ ಪಡೆಯದೆ ನೀಡುವ ಮುಂಭಡ್ತಿ ಕಾನೂನು ಬಾಹಿರ’ ಎಂದು ಪರಿಗಣಿಸಿದಲ್ಲಿ, ಈಗಾಗಲೇ ದಶಕಗಳ ಕಾಲ ವಿಶ್ವವಿದ್ಯಾನಿಲಯದಲ್ಲಿ ಸೇವೆ ಸಲ್ಲಿಸಿ, ಉಪಕುಲಸಚಿವರಾಗಿ ಮುಂಭಡ್ತಿ ಪಡೆದು ಪ್ರಸಕ್ತ ಸದರಿ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿರುವವರು ಮತ್ತು ಈಗಾಗಲೇ ಸೇವೆಯಿಂದ ನಿವೃತ್ತರಾದವರ ಮೇಲೆ ಅತ್ಯಂತ ಪ್ರತಿಕೂಲ ಪರಿಣಾಮ ಬೀರಬಲ್ಲದು. ಇದು ಕಾನೂನು ಬಾಹಿರ ಕ್ರಮ.

ಇದು ಸಾಧುವೂ ಅಲ್ಲ. ಸಾಧ್ಯವೂ ಇಲ್ಲ. ಆದ್ದರಿಂದ.....

4. ಮಂಗಳೂರು ವಿಶ್ವವಿದ್ಯಾನಿಲಯವು ಆರಂಭವಾಗಿ ನಾಲ್ಕು ದಶಕಗಳ ಬಳಿಕ ಇದೇ ಪ್ರಥಮ ಬಾರಿಗೆ ಪರಿಶಿಷ್ಟ ಜಾತಿಗಳಿಗೆ ಸೇರಿದ ಮೂವರು (ಮೂವರೂ ಮಹಿಳೆಯರು) ಉಪಕುಲಸಚಿವ ಹುದ್ದೆಗೆ ಮುಂಭಡ್ತಿ ಪಡೆಯಲು ಅರ್ಹತೆಯನ್ನು ಪಡೆದುಕೊಂಡಿರುವಾಗ, ಸಂವಿಧಾನ ವಿಧಿ (Article) 38 ಮತ್ತು 46 ನಲ್ಲಿ ಪ್ರತಿಪಾದಿಸಿರುವಂತೆ ವಿಶ್ವವಿದ್ಯಾನಿಲಯ ಮತ್ತು ಸರಕಾರ ಅತ್ಯಂತ ವಿಶೇಷ ಕಾಳಜಿ ವಹಿಸಿ ಈ ಸಮುದಾಯಗಳ ಆರ್ಥಿಕ ಮತ್ತು ಶೈಕ್ಷಣಿಕ ಹಿತಾಸಕ್ತಿಗಳನ್ನು ರಕ್ಷಿಸಬೇಕಲ್ಲದೆ ಸಾಮಾಜಿಕ ನ್ಯಾಯವನ್ನು ಖಾತರಿಗೊಳಿಸಲು ಅಗತ್ಯ ಆಡಳಿತಾತ್ಮಕ ಕ್ರಮ ಜರುಗಿಸಲೇಬೇಕಾಗಿರುವುದರಿಂದ.....

5. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕಳೆದ ನಾಲ್ಕು ದಶಕಗಳ ಕಾಲ ಸರಕಾರದ ಪೂರ್ವಾನುಮತಿ ಪಡೆಯದೆಯೇ ಸಹಾಯಕ ಕುಲಸಚಿವರ ಹುದ್ದೆಯಿಂದ ಉಪಕುಲಸಚಿವರ ಹುದ್ದೆಗೆ ಮುಂಭಡ್ತಿ ನೀಡಲಾಗಿರುವುದರಿಂದ....

6. ಇದಲ್ಲದೆ, ಮಂಗಳೂರು ವಿಶ್ವವಿದ್ಯಾನಿಲಯದ ಕುಲಾಧಿಪತಿಗಳು ಹಾಗೂ ಸರಕಾರದ ಮುಖ್ಯಸ್ಥರೂ ಆಗಿರುವ ಗೌರವಾನ್ವಿತ ರಾಜ್ಯಪಾಲರೇ, ದಿನಾಂಕ 05.09.2022 ತಮ್ಮ ಪತ್ರದಲ್ಲಿ, ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಖಾಲಿಯಿರುವ ಉಪಕುಲಸಚಿವರು ಮತ್ತು ಸಹಾಯಕ ಕುಲಸಚಿವರ ಹುದ್ದೆಗಳನ್ನು ಆದ್ಯತೆಯ ನೆಲೆಯಲ್ಲಿ ಭರ್ತಿಗೊಳಿಸಿ, ಜವಾಬ್ದಾರಿಗಳನ್ನು ಹಂಚಲು ಮತ್ತು ಈಗಾಗಲೇ ಸೃಜಿಸಲಾಗಿರುವ ವಿಶೇಷಾಧಿಕಾರಿಗಳ ಹುದ್ದೆಗಳನ್ನು ರದ್ದುಗೊಳಿಸಲು ಸೂಕ್ತಕ್ರಮ ಕೈಗೊಳ್ಳಬೇಕು ಎಂದು ವಿಶ್ವವಿದ್ಯಾನಿಲಯಕ್ಕೆ ನಿರ್ದೇಶನ ನೀಡಿರುವುದರಿಂದ.....

7. ರಾಜ್ಯ ಸರಕಾರ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳ ಜನರಿಗೆ ಸರಕಾರ, ವಿಶ್ವವಿದ್ಯಾನಿಲಯಗಳ ಮತ್ತು ಸರಕಾರಿ ಸ್ವಾಮ್ಯದ ನಿಗಮ – ಮಂಡಳಿಗಳ ಸೇವೆಗಳಲ್ಲಿ ಶೇಕಡಾವಾರು ಮೀಸಲಾತಿ ಪ್ರಮಾಣವನ್ನು ಹೆಚ್ಚಿಸಲು ನಿರ್ಧಾರ ಕೈಗೊಂಡ ಹಿನ್ನಲೆಯಲ್ಲಿ, ನೇಮಕಾತಿ ಮತ್ತು ಮುಂಭಡ್ತಿ ಪ್ರಕ್ರಿಯೆ ನಡೆಸುವುದನ್ನು ತಡೆಹಿಡಿದಿತ್ತು. ಆದರೆ ತದನಂತರದಲ್ಲಿ ಈ ಸಂಬಂಧ ಕಾಯ್ದೆ ರೂಪಿಸಿದ ಸರಕಾರ, ದಿನಾಂಕ 28.12.2022 ರ ತನ್ನ ಪತ್ರದಲ್ಲಿ ಈ ಹಿಂದೆ ನೇಮಕಾತಿ ಮತ್ತು ಮುಂಭಡ್ತಿಗೆ ಹೇರಲಾಗಿದ್ದ, ತಡೆಯನ್ನು ತೆರವುಗೊಳಿಸಿ, ನೇಮಕಾತಿ ಮತ್ತು ಎಲ್ಲಾ ಮುಂಭಡ್ತಿಗಳಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿರುವುದರಿಂದ.....

8. ವಿಶ್ವವಿದ್ಯಾನಿಲಯದಲ್ಲಿ ಸಾಕಷ್ಟು ಸಮಯದಿಂದ ಖಾಲಿಯಿರುವ ಉಪಕುಲಸಚಿವ ಹುದ್ದೆಗೆ ಸಹಾಯಕ ಕುಲಸಚಿವರ ಹುದ್ದೆಯಿಂದ ಮುಂಭಡ್ತಿ

ನೀಡಲು ಅಗತ್ಯ ಕ್ರಮ ಕೈಗೊಳ್ಳಬೇಕೆಂದು ಈ ಹಿಂದೆಯೇ ವಿಶ್ವವಿದ್ಯಾನಿಲಯದ ಸಿಂಡಿಕೇಟ್ ನಿರ್ಣಯ ಕೈಗೊಂಡಿರುವುದರಿಂದ.....

ಸಹಾಯಕ ಕುಲಸಚಿವರ ಹುದ್ದೆಯಿಂದ ಉಪ ಕುಲಸಚಿವರ ಹುದ್ದೆಗೆ ಮುಂಭಡ್ತಿ ಆದೇಶ ನೀಡಲು ಪೂರ್ವಾನುಮತಿ ಪಡೆಯಬೇಕೆಂಬ ಅಭಿಪ್ರಾಯವನ್ನು ಈ ಸಿಂಡಿಕೇಟ್ ಸಭೆ 'ಅಸಮಂಜಸವಾದುದುದು ಎಂದು ತಿರಸ್ಕರಿಸಿದೆ' ಎಂದು ನಿರ್ಣಯ ಅಂಗೀಕರಿಸಿದೆ.

ಈ ಹಿನ್ನೆಲೆಯಲ್ಲಿ ವಿಶ್ವವಿದ್ಯಾನಿಲಯದ ಬೋಧಕೇತರ ಸಿಬ್ಬಂದಿಗಳ ನೇಮಕಾತಿ ಮಂಡಳಿ ದಿನಾಂಕ **27.01.2023**ರಂದು ಸಹಾಯಕ ಕುಲಸಚಿವರ ಹುದ್ದೆಯಿಂದ ಉಪಕುಲಸಚಿವರ ಹುದ್ದೆಗೆ ಮುಂಭಡ್ತಿಗೆ ಆಯ್ಕೆ ಮಾಡಿರುವ ಶ್ರೀಮತಿ ಲಲಿತಾ ಕೆ.ಆರ್. ಮತ್ತು ಶ್ರೀಮತಿ ನಾಗವೇಣಿ ಪಿ. ಇವರುಗಳು ಉಪಕುಲಸಚಿವರ ಹುದ್ದೆಗೆ ಹಾಜರಾಗಿ ಕರ್ತವ್ಯ ನಿರ್ವಹಿಸಲು ಅಗತ್ಯವಾದ ನೇಮಕಾತಿ/ಮುಂಭಡ್ತಿ ಆದೇಶವನ್ನು, ಇಂದೇ ದಿನಾಂಕ **31.01.2023**ರಂದು ಹೊರಡಿಸಲು ಮಾನ್ಯ ಕುಲಪತಿಗಳು ಮತ್ತು ಈ ಸಿಂಡಿಕೇಟ್ ಸಭೆ ನಿರ್ಣಯಿಸಿ ಮಾನ್ಯ ಕುಲಸಚಿವರಿಗೆ ಆದೇಶಿಸಿತು.

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.**1:38 (2023)** |
| ವಿಷಯ: | ದಿನಾಂಕ **01.01.2016**ರಿಂದ ಜಾರಿಗೊಂಡ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗೆ ಸಂಬಂಧಿಸಿದ ಅನುಶಾಸನದ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ನಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ / ಸ್ನಾತಕೋತ್ತರ ಕೇಂದ್ರ / ಘಟಕ ಕಾಲೇಜುಗಳ ಬೋಧಕರಿಗೆ ವೃತ್ತಿ ಪದೋನ್ನತಿ–ಸ್ಕ್ರೀನಿಂಗ್-ಕಂ-ಇವ್ಯಾಲ್ಯುವೇಶನ್ / ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |

| | |
|---|---|
| ಕಾರ್ಯಸೂಚಿ ಸಂಖ್ಯೆ: | ಸಿಬ್ಬಂದಿ:ಸಾ.ಸ.**1:39 (2023)** |
| ವಿಷಯ: | ದಿನಾಂಕ **01.01.2016**ರಿಂದ ಜಾರಿಗೊಂಡ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಗೆ ಸಂಬಂಧಿಸಿದ ಅನುಶಾಸನದ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ನಡಿಯಲ್ಲಿ ಸಹ ಪ್ರಾಧ್ಯಾಪಕ ಶೈಕ್ಷಣಿಕ ಹಂತ **13A** ರಿಂದ ಪ್ರಾಧ್ಯಾಪಕ ಶೈಕ್ಷಣಿಕ ಹಂತ **14** ಗೆ ಪದೋನ್ನತಿ ನೀಡುವುದಕ್ಕೆ ಸಂಬಂಧಿಸಿ ಆಯ್ಕೆ ಸಮಿತಿಯ ಶಿಫಾರಸ್ಸುಗಳನ್ನು ಅನುಮೋದಿಸುವ ಬಗ್ಗೆ. |
| ನಿರ್ಣಯ: | ಅನುಮೋದಿಸಲಾಯಿತು. |

ಇತರ ವಿಷಯಗಳು

1. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸಾಮಾಜಿಕ ಜಾಲತಾಣ ನೀತಿಯನ್ನು ರಚಿಸುವ ಬಗ್ಗೆ ಸಿಂಡಿಕೇಟು ಸದಸ್ಯರಾದ ಪ್ರೊ. ಕರುಣಾಕರ ಎ. ಕೋಟೆಗಾರ್ ಇವರು ಸಭೆಯಲ್ಲಿ ಪ್ರಸ್ತಾಪಿಸಿದರು. ಈ ಹಿನ್ನೆಲೆಯಲ್ಲಿ ಸಾಮಾಜಿಕ ಜಾಲತಾಣ ನೀತಿಯನ್ನು ತಯಾರಿಸಬೇಕೆಂಬುದಾಗಿ ಸಿಂಡಿಕೇಟು ನಿರ್ಣಯಿಸಿ, ಸಮಿತಿಯನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಗಳಿಗೆ ನೀಡಲಾಯಿತು.

ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

| | |
|---|---|
| ಸಹಿ/- | ಸಹಿ/- |
| ಕುಲಸಚಿವರು | ಕುಲಪತಿಗಳು. |